# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,-6476/2014/ಡಿ.ಆರ್.ಇ-2 ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 26/11/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಪುತ್ತೂರು ನಗರಸಭೆಯ ತಂಗುದಾಣದ ಬೋರ್ಡ್‌ನಲ್ಲಿ ಶುಲ್ಕದ ವಿವರವನ್ನು ಕೆಂಪು ದೊಡ್ಡ ಅಕ್ಷರಗಳಲ್ಲಿ ಸಾರ್ವಜನಿಕರಿಗೆ ಅರ್ಥವಾಗುವ ರೀತಿಯಲ್ಲಿ ಬರೆಯುವ ಬಗ್ಗೆ ಹಾಗೂ ಅನಧಿಕೃತ ವಾಹನ ಆಟೋರಿಕ್ಷಾ/ವಾಹನಗಳ ತಂಗುದಾಣಗಳನ್ನು ತೆರೆವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಬಾಲಚಂದ್ರ ಭಟ್.ಎಂ ಬಿನ್ ಎನ್.ಕೃಷ್ಣ ಭಟ, ಮಚ್ಚಿಮಲೆ, ಆರ್ಯಪು ಅಂಚೆ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಮುಖ್ಯಾಧಿಕಾರಿಗಳು, ನಗರಸಭೆ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಪುತ್ತೂರು ಪುರಸಭೆ ವ್ಯಾಪ್ತಿಯಲ್ಲಿ ರಿಕ್ಷಾ ವಾಹನಗಳಿಗಾಗಿ ಶುಲ್ಕ ಪಾವತಿ ತಂಗುದಾಣವನ್ನು ಪುರಸಭೆ ಏರ್ಪಡಿಸಿದೆ. ಹಾಗೂ ವಾಹನಗಳಿಗೆ ಶುಲ್ಕವನ್ನು ನಿಗಧಿಪಡಿಸಿರುತ್ತದೆ. ಆದರೆ ಏಲಂದಾರರು/ಪುರಸಭೆಯವರು ಆ ಶುಲ್ಕವನ್ನು ಸಾರ್ವಜನಿಕವಾಗಿ ಕಾಣಿಸಲು ಯಾವುದೇ ಫಲಕವನ್ನು ಹಾಕಿರುವುದಿಲ್ಲ. ಏಲಂದಾರರು ವಾಹನ ಮಾಲೀಕರಿಂದ ದುಪ್ಪಟ್ಟು ಶುಲ್ಕವನ್ನು ವಸೂಲಿ ಮಾಡುತ್ತಿದ್ದಾರೆ. ಈ ಬಗ್ಗೆ ಪುರಸಭೆಯ ಮುಖ್ಯಾಧಿಕಾರಿಯವರ ಗಮನಕ್ಕೆ ಅರ್ಜಿ ಮೂಲಕ ತಂದಿದ್ದರೂ ಕೂಡ ಮುಖ್ಯಾಧಿಕಾರಿಗಳು ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಶುಲ್ಕ ಪಾವತಿ

ತಂಗುದಾಣದಲ್ಲಿ ಸಾರ್ವಜನಿಕವಾಗಿ ಕಾಣಿಸಲು ಎಲ್ಲ ಕಡೆ ಶುಲ್ಕದ ವಿವರಗಳ ಫಲಕವನ್ನು ಅಳವಡಿಸುವಂತೆ ಹಾಗೂ ಏಲಂದಾರರು ನಿಗಧಿಪಡಿಸಿದ ಶುಲ್ಕವನ್ನು ವಸೂಲಿ ಮಾಡಲು ಮತ್ತು ಅನಧಿಕೃತ ರಿಕ್ಷಾ ತಂಗುದಾಣಗಳನ್ನು ತೆರವುಗೊಳಿಸಿ ಅಧಿಕೃತ ರಿಕ್ಷಾ ತಂಗುದಾಣಗಳಲ್ಲಿ ವಾಹನ ನಿಲ್ಲಲು ಕ್ರಮಕೈಗೊಳ್ಳಲು ಎದುರುದಾರರಿಗೆ ನಿರ್ದೇಶಿಸಬೇಕೆಂದು ಕೋರಿರುತ್ತಾರೆ.

3. ದೂರಿನ ಜೊತೆಗೆ ಪುತ್ತೂರು ಪುರಸಭೆ ಕಾರ್ಯಲಯದ ದಿನಾಂಕ: 19/03/2013ರ ನಡವಳಿಯ ಪ್ರತಿಯನ್ನು ಹಾಜರುಮಾಡಿರುತ್ತಾರೆ.

4. ದೂರು ದಾಖಲಾದ ನಂತರ ಮಾನ್ಯ ಉಪಲೋಕಾಯುಕ್ತರು ದಿನಾಂಕ: 06/06/2014 ರಂದು ಎದುರುದಾರರಿಗೆ ವಾಹನ ನಿಲುಗಡೆಯ ಶುಲ್ಕದ ಬಗ್ಗೆ ಫಲಕವನ್ನು ಹಾಕುವಂತೆ ಮತ್ತು ಆಟೋರಿಕ್ಷಾ ನಿಲ್ದಾಣದ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಪೋಲೀಸ್ ಠಾಣೆಗೆ ನೀಡಿ ಆಟೋರಿಕ್ಷಾ ನಿಲ್ದಾಣದಲ್ಲಿ ತಮ್ಮ ರಿಕ್ಷಾಗಳನ್ನು ನಿಲ್ಲಿಸಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಪೋಲೀಸರಿಗೆ ಆದೇಶ ಮಾಡಿದ್ದರು. ಈ ಬಗ್ಗೆ ವರದಿ ಸಲ್ಲಿಸಲು ಎದುರುದಾರರಿಗೆ ಸೂಚಿಸಲಾಗಿತ್ತು.

5. ದಿನಾಂಕ: 10/02/2015 ರಂದು ಎದುರುದಾರರು ವರದಿಯನ್ನು ಸಲ್ಲಿಸಿ ಪುರಸಭಾ ಲಘುವಾಹನ ತಂಗುದಾಣದ ದರ್ಬೆ ಪಾರ್ಕಿಂಗಸ್ ವರಿ(ಶುಲ್ಕ) ವಸೂಲು ಮಾಡುವ ಹಕ್ಕನ್ನು 2013–14ನೇ ಸಾಲಿನಲ್ಲಿ ಜಯರಾಮನಾಯಕ್ ಗುಳೇರಿ ಕಟ್ಟೆ ಇವರಿಗೆ ಟೆಂಡರ್ ಮೂಲಕ ನೀಡಲಾಗಿದೆ. ಟೆಂಡರ್ ಷರತ್ತುಗಳಂತೆ ಸದರಿ ತಂಗುದಾಣದಲ್ಲಿ ವಾಹನಗಳಿಗಾಗಿ ಶುಲ್ಕದ ವಿವರಗಳ ಫಲಕವನ್ನು ಟೆಂಡರ್ ದಾರರು ಅಳವಡಿಸಿರುತ್ತಾರೆ. ಮುಂದುವರೆದು ಬಿಟ್ಟು ಹೋಗಿರುವ ರಿಕ್ಷಾ ಪಾರ್ಕಿಂಗ್‌ಗಾಗಿ (1) ಸರ್ಕಾರಿ ಆಸ್ಪತ್ರೆ ಆವರಣ ಗೋಡೆ ಬಳಿ, (2) ಪುರಸಭೆ ಕಿಲ್ಲೆ ಮೈದಾನ ಪ್ರವೇಶದ್ವಾರ, ಪುರಸಭಾ ವಾಣಿಜ್ಯ ಸಂಕೀರ್ಣ/ಶೌಚಾಲಯದ ಬಳಿ, (3) ಎಪಿಎಂಸಿ ಕ್ರಾಸ್ ರಸ್ತೆ ಎಡಕ್ಕೆ ಸರ್ಕಾರಿ ಭಾವಿಯಿಂದ ಮುಂದಕ್ಕೆ ಈ ಮೂರು ಕಡೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲಿಸಿದ್ದು, ರಿಕ್ಷಾ ಪಾರ್ಕಿಂಗ್‌ಗಾಗಿ ಅನುವು ಮಾಡಿಕೊಡಬಹುದೆಂದು ಜಿಲ್ಲಾದಿಕಾರಿಗಳಿಗೆ ಪತ್ರ ಬರೆದಿರುವುದಾಗಿ ತಿಳಿಸಿರುತ್ತಾರೆ. ದಿನಾಂಕ: 09/05/2015 ರಂದು ಜಿಲ್ಲಾದಿಕಾರಿಗಳಿಗೆ ಅನುಮತಿ ಕೋರಿ ಬರೆದ ಪತ್ರದ ಪ್ರತಿಯನ್ನು ಮತ್ತು ಶುಲ್ಕದ ಫಲಕವನ್ನು ಅಳವಡಿಸಿದ ಛಾಯಾಚಿತ್ರವನ್ನು ಹಾಜರು ಮಾಡಿರುತ್ತಾರೆ.

6. ದೂರುದಾರರು ದಿನಾಂಕ: 12/05/2015 ರಂದು ಪ್ರತ್ಯುತ್ತರ ಸಲ್ಲಿಸಿ ವಾಹನ ತಂಗುದಾಣದಲ್ಲಿ ಪುರಸಭೆಯ ನಾಮಫಲಕವನ್ನು ದೊಡ್ಡ ಅಕ್ಷರದಲ್ಲಿ ಹಾಕಿರುತ್ತಾರೆ. ಆದರೆ ಶುಲ್ಕದ ವಿವರವನ್ನು ಕಣ್ಣಿಗೆ ಕಾಣದಂತೆ ಚಿಕ್ಕ ಅಕ್ಷರದಲ್ಲಿ ಹಾಕಿರುತ್ತಾರೆ. ಅಲ್ಲದೆ ಸದರಿ ತಂಗುದಾಣವು ಸುಮಾರು 200-250 ಮೀಟರ್ ವರೆಗೂ ಉದ್ದವಿರುವುದರಿಂದ 3-4 ಕಡೆಗಳಲ್ಲಾದರೂ ದಪ್ಪ ಅಕ್ಷರಗಳಲ್ಲಿ ಫಲಕ ಅಳವಡಿಸಲು ಕೋರಿರುತ್ತಾರೆ. ಅಲ್ಲದೆ ಏಲಂದಾರರು ಟೆಂಡರ್ ಷರತ್ತುಗಳನ್ನು ಉಲ್ಲಂಘಿಸಿ ದುಪ್ಪಟ್ಟು ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಕಾರಣ ಸದರಿ ಏಲಂದಾರರ ಟೆಂಡರ್ ರದ್ದುಗೊಳಿಸಬೇಕೆಂದು ಕೋರಿರುತ್ತಾರೆ.

7. ದಿನಾಂಕ: 11/11/2016 ರಂದು ಎದುರುದಾರರು ತಮ್ಮ ಮುಂದುವರೆದ ವರದಿಯನ್ನು ಸಲ್ಲಿಸಿ, ಮೇಲ್ಕಂಡ ಪುರಸಭಾ ಲಘುವಾಹನ ತಂಗುದಾಣದ ದರ್ಬೆ ಪಾರ್ಕಿಂಗನಲ್ಲಿ ಶುಲ್ಕ ಪಾವತಿ ಬಗ್ಗೆ ಪ್ರಕಟಣಾ ಫಲಕವನ್ನು ಅಳವಡಿಸಿ, ಸದರಿ ತಂಗುದಾಣವನ್ನು ವಾರ್ಷಿಕವಾಗಿ ಟೆಂಡರ್ ಮೂಲಕ ಶ್ರೀ ಜಯರಾಮ ನಾಯಕ್ ಅವರಿಗೆ ವರಿ ವಸೂಲಿ ಹಕ್ಕನ್ನು ವಹಿಸಿಕೊಡಲಾದಂತೆ ಸದರಿಯವರು ಶುಲ್ಕವನ್ನು ವಸೂಲಿ ಮಾಡುತ್ತಿದ್ದಾರಂದು ತಿಳಿಸಿರುತ್ತಾರೆ. ಎದುರುದಾರರು ಮುಂದುವರೆದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಕರ್ನಾಟಕ ರಾಜ್ಯ ಪತ್ರದ ಅಧಿಸೂಚನೆ ದಿನಾಂಕ: 30/07/2012 ರಲ್ಲಿ ಆಟೋರಿಕ್ಷಾ ವಾಹನ ತಂಗುದಾಣಗಳನ್ನು ಅಧಿಕೃತವಾಗಿ ಘೋಷಿಸಿದಂತೆ ವಾಹನ ನಿಲುಗಡೆ ಮಾಡಲಾಗುತ್ತದೆ. ಕೆಲವು ಸ್ಥಳಗಳಲ್ಲಿ ಆಟೋರಿಕ್ಷಾ ವಾಹನ ತಂಗುದಾಣಗಳನ್ನು ಮಾಡಲು ಬಿಟ್ಟು ಹೋಗಿದ್ದು ಅವನ್ನು ತಂಗುದಾಣವೆಂದು ಘೋಷಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆಯೆಂದು ತಿಳಿಸಿರುತ್ತಾರೆ. ತಮ್ಮ ವರದಿಯ ಜೊತೆಗೆ ಕರ್ನಾಟಕ ರಾಜ್ಯ ಪತ್ರ ದಿನಾಂಕ: 09/08/2012ರ ಅಧಿಸೂಚನೆಯ ಪ್ರತಿಯನ್ನು ಹಾಜರುಮಾಡಿದ್ದು, ಪುತ್ತೂರು ಪುರಸಭೆಯ ವ್ಯಾಪ್ತಿಯಲ್ಲಿ 22 ಸ್ಥಳಗಳಲ್ಲಿ ಆಟೋರಿಕ್ಷಾ ಪಾರ್ಕಿಂಗ್ ಸ್ಥಳವೆಂದು ಘೋಷಿಸಿರುತ್ತಾರೆ.

8. ಎದುರುದಾರರಿಗೆ ಬಿಟ್ಟುಹೋದ ತಂಗುದಾಣದ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆಯೆಂದು ಮುಂದುವರೆದ ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ ಈವರೆಗೂ ಎದುರುದಾರರು ಬಿಟ್ಟುಹೋದ ತಂಗುದಾಣದ ಬಗ್ಗೆ ಮುಂದುವರೆದ ವರದಿ ಸಲ್ಲಿಸಿರುವುದಿಲ್ಲ.

9. ಎದುರುದಾರರು ಹಾಜರುಪಡಿಸಿದ ಕರ್ನಾಟಕ ರಾಜ್ಯ ಪತ್ರದಲ್ಲಿ ಮುತ್ತೂರು ಪುರಸಭೆಯ ವ್ಯಾಪ್ತಿಯಲ್ಲಿ 22 ಸ್ಥಳಗಳಲ್ಲಿ ಆಟೋರಿಕ್ಷಾ ಪಾರ್ಕಿಂಗ್ ಸ್ಥಳವೆಂದು ಘೋಷಿಸಿರುವುದು ಕಂಡುಬರುತ್ತದೆ. ದೂರುದಾರರು ಸದರಿ ತಂಗುದಾಣಗಳಲ್ಲಿ ವಾಹನಗಳ ಶುಲ್ಕ ಫಲಕವನ್ನು ಅಳವಡಿಸಿರುವುದಿಲ್ಲವೆಂದು ಆಪಾದಿಸಿರುತ್ತಾರೆ. ಎದುರುದಾರರು ಒಂದು ಸ್ಥಳದ ಶುಲ್ಕ ಫಲಕ ಅಳವಡಿಸಿದ ಬಗ್ಗೆ ಛಾಯಾಚಿತ್ರವನ್ನು ಹಾಜರುಮಾಡಿರುತ್ತಾರೆ. ಆದರೆ ಉಳಿದ 21 ಆಟೋರಿಕ್ಷಾ ಪಾರ್ಕಿಂಗ್ ಸ್ಥಳಗಳಲ್ಲಿ ಶುಲ್ಕ ಫಲಕ ಅಳವಡಿಸಿದ ಬಗ್ಗೆ ಛಾಯಾಚಿತ್ರವನ್ನು ಹಾಜರುಮಾಡಿರುವುದಿಲ್ಲ.

10. ಆದ್ದರಿಂದ ಉಳಿದ 21 ಆರೋರಿಕ್ಷಾ ಪಾರ್ಕಿಂಗ್ ಸ್ಥಳಗಳಲ್ಲಿ ಶುಲ್ಕ ಫಲಕ ಅಳವಡಿಸಿದ ಮತ್ತು ಪ್ರಸ್ತುತ ಸಾಲಿನಲ್ಲಿ ಎಷ್ಟು ಶುಲ್ಕವನ್ನು ನಿಗಧಿಪಡಿಸಲಾಗಿದೆ, ಏಲಂದಾರರು ಯಾರಾಗಿದ್ದಾರೆ ಎಂಬ ವರದಿ ಸಲ್ಲಿಸುವಂತೆ ಎದುರುದಾರರಿಗೆ ತಿಳಿಸಲಾಗಿತ್ತು.

11. ದಿನಾಂಕ: 13/03/2019 ರಂದು ಎದುರುದಾರರು ವರದಿ ಕಳುಹಿಸಿದ್ದು, ಅದರಲ್ಲಿ ಪುತ್ತೂರು ನಗರಸಭಾ ವ್ಯಾಪ್ತಿಯೊಳಗೆ ಇರುವ ಆಟೋರಿಕ್ಷಾ ಪಾರ್ಕಿಂಗ್‌ಗೆ ನಗರಸಭೆಯ ವತಿಯಿಂದ ಪಾರ್ಕಿಂಗ್ ಶುಲ್ಕ ವರಿ (ವಸೂಲಿ) ಮಾಡುತ್ತಿಲ್ಲ. ಹಾಗಾಗಿ ಶುಲ್ಕ ಫಲಕ ಅಳವಡಿಸಿಲ್ಲ. ಲಘು ವಾಹನ ತಂಗುದಾಣ ವರಿ ವಸೂಲಿ ಹಕ್ಕನ್ನು ಎರಡು ಕಡೆಗಳಲ್ಲಿ ಏಲಂಮಾಡಲಾಗುತ್ತಿದೆಯೆಂದು ತಿಳಿಸಿದ್ದಾರೆ.

12. ಲಘು ವಾಹನ ವರಿ ವಸೂಲಿ ಹಕ್ಕನ್ನು 2 ಕಡೆಗಳನ್ನು ಏಲಂ ಇಲ್ಲಿಯವರೆಗೆ ಮಾಡಿದ್ದಾರೋ ಅಥವಾ ಇಲ್ಲವ್ವೋ, ಮಾಡದಿದ್ದರೆ ತ್ವರಿತವಾಗಿ ಮಾಡಿ ನಗರಸಭೆ ವ್ಯಾಪ್ತಿಯ 22 ಸ್ಥಳಗಗಳಲ್ಲಿ ವಾಹನ ಶುಲ್ಕ ಫಲಕ ಅಳವಡಿಸಿ ಛಾಯಾಚಿತ್ರಗಳೊಂದಿಗೆ ವರದಿ ಸಲ್ಲಿಸಬೇಕೆಂದು ತಿಳಿಸಲಾಗಿತ್ತು.

13. ದಿನಾಂಕ: 31/08/2019 ರಂದು ಎದುರುದಾರರು ವರದಿ ಹಾಗೂ ದಾಖಲೆ ಹಾಗೂ ಛಾಯಾಚಿತ್ರಗಳ ಕಲರ್ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿದ್ದಾರೆ. ಸದರಿ ವರದಿಯಲ್ಲಿ ಪುತ್ತೂರು ನಗರಸಭೆ ವ್ಯಾಪ್ತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾಡಳಿತದ ನಿರ್ದೇಶನದಂತೆ ಪುತ್ತೂರು ತಾಲ್ಲೂಕು ಆಡಳಿತ ಮತ್ತು ಪುತ್ತೂರು ನಗರ ಠಾಣಾಧಿಕಾರಿ ಮತ್ತು ನಗರಸಭೆಯ ಜಂಟಿ ಸಹಭಾಗಿತ್ವದಲ್ಲಿ ನಗರ ವ್ಯಾಪ್ತಿಯಲ್ಲಿ ವಾಹನಗಳ ಸುಗಮ ಸಂಚಾರ ನಿಲುಗಡೆ ಏಕಮುಖ ಸಂಚಾರ/ವಾಹನ ನಿಲುಗಡೆ ನಿಷೇಧಗಳ

ಕುರಿತು 22 ಸ್ಥಳಗಳಲ್ಲಿ ಸಂಚಾರ/ನಿಲುಗಡೆಗಳ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಲಾಗಿರುತ್ತದೆ. ಪುತ್ತೂರು ನಗರಸಭೆಯ ಸಾಮಾನ್ಯ ಸಭೆ/ಜಿಲ್ಲಾಧಿಕಾರಿಯವರ ಅನುಮೋದನೆಯಂತೆ (1) ಪುತ್ತೂರು ಮುಖ್ಯ ಬಸ್ಸು ನಿಲ್ದಾಣ ಸಮೀಪ (2) ಪುತ್ತೂರು ದರ್ಬೆ ವೃತ್ತದ ಬಳಿ ಎರಡು ಕಡೆ ಮಾತ್ರ ದ್ವಿಚಕ್ರಮ ಮತ್ತು ಚತುಷ್ಚಕ್ರ ವಾಹನ ನಿಲುಗಡೆ ಮಾತ್ರ ನಿಯಮಾವಳಿಯಂತೆ ವಾರ್ಷಿಕ ಅವಧಿಗೆ ಟೆಂಡರ್ ಕರೆದು ದ್ವಿಚಕ್ರ ವಾಹನಗಳಿಗೆ ದಿನ ಒಂದರ ರೂ.5.00 ಮತ್ತು ಲಘು ವಾಹನಗಳಿಗೆ ದಿನ ಒಂದರ ರೂ.10.00 ರ ಶುಲ್ಕ ನಿಗಧಿಪಡಿಸಿ ವರಿ ವಸೂಲಿ ಹಕ್ಕನ್ನು ನೀಡಲಾಗಿರುತ್ತದೆ. ಮೇಲೆ ತಿಳಿಸಿರುವ ಎರಡು ಕಡೆಗಳಲ್ಲಿ ಶುಲ್ಕ ಫಲಕ ಅಳವಡಿಸಲಾಗಿರುತ್ತದೆ ಅಂತಾ ಸದರಿ ವರಿ ವಸೂಲಿ ಹಕ್ಕಿನ ಏಲಂ ಖಾಯಾಂದ ಮಾಹಿತಿ ವಿವರ, ಶುಲ್ಕ ಫಲಕದ ಛಾಯಾಚಿತ್ರಗಳನ್ನು ಪತ್ರದೊಂದಿಗೆ ಹಾಜರುಪಡಿಸಿರುತ್ತಾರೆ.

14. ದಿನಾಂಕ: 13/03/2019 ರಂದು ಎದುರುದಾರರು ವರದಿ ಕಳುಹಿಸಿದ್ದು, ಅದರಲ್ಲಿ ಪುತ್ತೂರು ನಗರಸಭಾ ವ್ಯಾಪ್ತಿಯೊಳಗೆ ಇರುವ ಆಟೋರಿಕ್ಷಾ ಪಾರ್ಕಿಂಗ್‌ಗೆ ನಗರಸಭೆಯ ವತಿಯಿಂದ ಪಾರ್ಕಿಂಗ್ ಶುಲ್ಕ ವರಿ (ವಸೂಲಿ) ಮಾಡುತ್ತಿಲ್ಲ. ಹಾಗಾಗಿ ಶುಲ್ಕ ಫಲಕ ಅಳವಡಿಸಿಲ್ಲ. ಲಘು ವಾಹನ ತಂಗುದಾಣ ವರಿ ವಸೂಲಿ ಹಕ್ಕನ್ನು ಎರಡು ಕಡೆಗಳಲ್ಲಿ ಏಲಂಮಾಡಲಾಗುತ್ತಿದೆಯೆಂದು ತಿಳಿಸಿದ್ದಾರೆ. ಈಗ ಅಂದರೆ 31/08/2019ರ ವರದಿಯಲ್ಲಿ ಪುತ್ತೂರು ನಗರಸಭೆಯ ಸಾಮಾನ್ಯ ಸಭೆ/ಜಿಲ್ಲಾಧಿಕಾರಿಯವರ ಅನುಮೋದನೆಯಂತೆ (1) ಪುತ್ತೂರು ಮುಖ್ಯ ಬಸ್ಸು ನಿಲ್ದಾಣ ಸಮೀಪ (2) ಪುತ್ತೂರು ದರ್ಬೆ ವೃತ್ತದ ಬಳಿ ಎರಡು ಕಡೆ ಮಾತ್ರ ದ್ವಿಚಕ್ರಮ ಮತ್ತು ಚತುಷ್ಚಕ್ರ ವಾಹನ ನಿಲುಗಡೆ ಮಾತ್ರ ನಿಯಮಾವಳಿಯಂತೆ ವಾರ್ಷಿಕ ಅವಧಿಗೆ ಟೆಂಡರ್ ಕರೆದು ದ್ವಿಚಕ್ರ ವಾಹನಗಳಿಗೆ ದಿನ ಒಂದರ ರೂ.5.00 ಮತ್ತು ಲಘು ವಾಹನಗಳಿಗೆ ದಿನ ಒಂದರ ರೂ.10.00 ರ ಶುಲ್ಕ ನಿಗಧಿಪಡಿಸಿ ವರಿ ವಸೂಲಿ ಹಕ್ಕನ್ನು ನೀಡಲಾಗಿರುತ್ತದೆ. ಮೇಲೆ ತಿಳಿಸಿರುವ ಎರಡು ಕಡೆಗಳಲ್ಲಿ ಶುಲ್ಕ ಫಲಕ ಅಳವಡಿಸಲಾಗಿರುತ್ತದೆ ಅಂತಾ ಸದರಿ ವರಿ ವಸೂಲಿ ಹಕ್ಕಿನ ಏಲಂ ಖಾಯಾಂದ ಮಾಹಿತಿ ವಿವರ, ಶುಲ್ಕ ಫಲಕದ ಛಾಯಾಚಿತ್ರಗಳನ್ನು ಪತ್ರದೊಂದಿಗೆ ಹಾಜರುಪಡಿಸಿರುತ್ತಾರೆ.

15. ತಂಗುದಾಣದ ವರಿ ವಸೂಲಿ ಹಕ್ಕನ್ನು ಫಾರೆಸ್ಟ್ ಕಛೇರಿಯಿಂದ ನೆಲೆಕಟ್ಟೆ ಆಯಿಲ್ ಮಿಲ್ ಹತ್ತಿರದವರೆಗೆ ಹಾಗೂ ಕೆ.ಎಸ್.ಆರ್.ಟಿ.ಸಿ.,ಯ ಕುಡ್ಸಿಂಪು ನಗರಸಭಾ ವಾಣಿಜ್ಯ ಸಂಕೀರ್ಣದ ತಳ ಅಂತಸ್ತಿನ ವರಿ ವಸೂಲಿ ಹಕ್ಕನ್ನು ಶ್ರೀ ಸೋಮನಾಥ್ ಇವರು ಅತಿ ಹೆಚ್ಚಿನ ಬಿಡ್ ಮೊತ್ತ

ರೂ.85,000/– ಜಿ.ಎಸ್.ಟಿ., 18% ಸೇರಿ ರೂ.1,00,300/– ಆಗಿದ್ದು, ಟೆಂಡರ್ ಷರತ್ತಿನಂತೆ ಬಿಡ್ ಮೊತ್ತದ 25% ರೂ.25,075/– ಪಾವತಿಸಿದ್ದು ಟೆಂಡರ್ ಒಪ್ಪಬಹುದಾಗಿದೆ ಎಂದು ಉಲ್ಲೇಖಿಸಿದ್ದಾರೆ.

16. ದರ್ಬೆ ಸರ್ಕಲ್ ನಿಂದ ಏಲ್ಮುಡಿ ಸೇತುವೆಯವರೆಗಿನ ರಸ್ತೆ ಬದಿ ದೀಪಕ್ ಗ್ಯಾರೇಜ್ ಎದುರು ಹಾಗೂ ಗಿರಿಜಾ ಕ್ಲಿನಿಕ್ ಎದುರು ನಿರ್ಮಿಸಿರುವ ಲಘು ವಾಹನ ತಂಗುದಾಣದ ವರಿ ವಸೂಲಿ ಹಕ್ಕನ್ನು ಅತಿ ಹೆಚ್ಚಿನ ಬಿಡ್‌ದಾರರಾದ ಅಜೀಜ್ ದರ್ಬೆ ರೂ.60,000/– ಜಿ.ಎಸ್.ಟಿ. 18%, ರೂ.70,800/– ಆಗಿದ್ದು, ಟೆಂಡರ್ ಷರತ್ತಿನಂತೆ ಬಿಡ್ ಮೊತ್ತದ 25% ರೂ.17,500/– ಪಾವತಿಸಿದ್ದು ಟೆಂಡರ್ ಒಪ್ಪಬಹುದಾಗಿದೆ ಎಂದು ಉಲ್ಲೇಖಿಸಿರುವ ದಾಖಲೆಯನ್ನು ಹಾಜರುಪಡಿಸಿದ್ದಾರೆ.

17. ಎದುರುದಾರರ ಪ್ರಕಾರ ಎರಡು ಪ್ರತ್ಯೇಕ ತಂಗುದಾಣಗಳ ವರಿ ವಸೂಲಿ ಹಕ್ಕನ್ನು (1) ಶ್ರೀ ಸೋಮನಾಥ್ ಇವರಿಗೆ (2) ಶ್ರೀ ಅಜೀಜ್ ದರ್ಬೆ ಇವರಿಗೆ ವಹಿಸಿದ್ದಾರೆಂದು ಕಂಡುಬರುತ್ತದೆ. ಛಾಯಾಚಿತ್ರಗಳ ಕಲರ್ ಜೆರಾಕ್ಸ್ ಪ್ರತಿಗಳನ್ನು ನೋಡಲಾಗಿ, ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳ ತಂಗುದಾಣಗಳಲ್ಲಿ ದೊಡ್ಡ ಕೆಂಪು ಅಕ್ಷರಗಳಲ್ಲಿ ಬರೆದಿದ್ದು, ಶುಲ್ಕ ಚಿಕ್ಕ ಅಕ್ಷರಗಳಲ್ಲಿ ರೂ.5/– ಮತ್ತು ರೂ.10/– ಎಂದು ಬರೆದಿದ್ದು ಕಂಡುಬರುತ್ತದೆ.

18. ಈ ಹಿಂದೆ ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸಹಿತ ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳ ತಂಗುದಾಣಗಳಲ್ಲಿ ದೊಡ್ಡ ಕೆಂಪು ಅಕ್ಷರಗಳಲ್ಲಿ ಬರೆದಿದ್ದು, ಶುಲ್ಕ ಚಿಕ್ಕ ಅಕ್ಷರಗಳಲ್ಲಿ ರೂ.5/– ಮತ್ತು ರೂ.10/– ಎಂದು ಬರೆದಿದ್ದು ಕಂಡುಬರುತ್ತದೆ. ಆದ್ದರಿಂದ, ಶುಲ್ಕವನ್ನು ಸಹಿತ ದೊಡ್ಡ ಅಕ್ಷರಗಳಲ್ಲಿ ಸಾರ್ವಜನಿಕರಿಗೆ ಅರ್ಥವಾಗುವ ರೀತಿಯಲ್ಲಿ ಬರೆದಿಲ್ಲವೆಂದು, ಅನಧಿಕೃತ ಆಟೋರಿಕ್ಷಾ ತಂಗುದಾಣಗಳನ್ನು ತೆರವುಗೊಳಿಸಿ ಅದನ್ನು ಸರಿಪಡಿಸುವಂತೆ ಆದೇಶ ನೀಡಬೇಕೆಂದು ಕೋರಿದ್ದರು. ಎದುರುದಾರರು ತಮ್ಮ ವರದಿಯಲ್ಲಿ ಅನಧಿಕೃತ ಆಟೋರಿಕ್ಷಾಗಳನ್ನು ತೆರವುಗೊಳಿಸಿರುವ ಬಗ್ಗೆ ಉಲ್ಲೇಖಿಸಿರುವುದಿಲ್ಲ. ಅಲ್ಲದೇ, ಅಧಿಕೃತ ಶುಲ್ಕ ವಸೂಲಾತಿ ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳ ತಂಗುದಾಣಗಳಲ್ಲಿ ಶುಲ್ಕವನ್ನು ಬೋರ್ಡ್ ಬರೆದ ಕೆಂಪು ಅಕ್ಷರಗಳಲ್ಲಿಯೇ ದೊಡ್ಡದಾಗಿ ಬರೆಯದೇ ಕೇವಲ ಈ ವರದಿ ಸಲ್ಲಿಸುವುದಕ್ಕಾಗಿ ಕೇವಲ ಚಿಕ್ಕ ಅಕ್ಷರಗಳಲ್ಲಿ ಕಪ್ಪು ಬಣ್ಣದಿಂದ (ಮಾರ್ಕ್‌ರ್) ದಿಂದ ಬರೆದು ಸಲ್ಲಿಸಿರಬಹುದಾಗಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

19. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಪುತ್ತೂರು ನಗರಸಭೆಯ ತಂಗುದಾಣದ ಬೋರ್ಡ್‌ನಲ್ಲಿ ಶುಲ್ಕದ ವಿವರವನ್ನು ಕೆಂಪು ದೊಡ್ಡ ಅಕ್ಷರಗಳಲ್ಲಿ ಸಾರ್ವಜನಿಕರಿಗೆ ಅರ್ಥವಾಗುವ ರೀತಿಯಲ್ಲಿ ಬರೆಯುವ ಬಗ್ಗೆ ಹಾಗೂ ಅನಧಿಕೃತ ವಾಹನ ಆಟೋರಿಕ್ಷಾ/ವಾಹನಗಳ ತಂಗುದಾಣಗಳನ್ನು ತೆರೆವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

20. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಒಂದು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6-12-19

[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.